


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26



| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204



ಸಂಪುಟ – 68 ಸಂಚಿಕೆ –02 ದಿನಾಂಕ : 09–07–2025


## ದಿನಾಂಕ: 09.07.2025 ರ ಮೊದಲನೇ ವಾರದ ಸಭೆ

ದೀನ ದಲಿತರಿಗೆ, ಬಡವರಿಗೆ, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದೇ ಪರಮೋಧರ್ಮ: (ಶ್ರೇಷ್ಟವಾದಧರ್ಮ)
– ವಿದ್ವಾನ್ ಶ್ರೀ ಲಕ್ಷ್ಮೀನಾರಾಯಣ ಭಟ್

ದಿನಾಂಕ: 09.07.2025 ರಂದು ರೋಟರಿ ಕ್ಲಬ್ ಶಿವಮೊಗ್ಗದ 2025–26 ನೇ ಸಾಲಿನ ಎರಡನೇ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿದ್ವಾನ್ ಶ್ರೀ ಲಕ್ಷ್ಮೀನಾರಾಯಣ ಭಟ್ ಮೇಲ್ಕಂಡಂತೆ ನುಡಿದರು. ಅವರು ರೋಟರಿಯ ಹಲವಾರು ಕೆಲಸವನ್ನು ಉಲ್ಲೇಖಿಸಿ ಶ್ಲಾಘಿಸುತ್ತಾ ಮೇಲಿನಂತೆ ನುಡಿದರು.

ವಿದ್ವಾನ್ ಶ್ರೀ ಲಕ್ಷ್ಮೀನಾರಾಯಣ ಭಟ್ ಜೊತೆಗೆ ನೂತನ ಅಧ್ಯಕ್ಷರಾದ ರೊ. ಆರ್.ಆನಂದ್ ಮತ್ತು ನೂತನ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿದ್ದರು.








ರೊ. ಭಾರ್ಗವಿ ಭಟ್"ಜೈ ಗಣರಾಯ ಶ್ರೀಗಣರಾಯ ಮಂಗಳ ಮೂರ್ತಿ ಮೋರಯ" ಎಂಬ ಹಾಡನ್ನು ಸುಶ್ರಾವ್ಯವಾಗಿ ಹಾಡುವುದರ ಮೂಲಕ ಅಂದಿನ ಸಭೆಗೆ ಚಾಲನೆ ನೀಡಿದರು. ರೊ.ಅನುರಾಧ ಶೀರನಾಳಿಯವರು ಸರ್ವರನ್ನು ಸ್ವಾಗತಿಸಿದರು. ರೊ. ಡಿ.ಎಲ್. ಮಂಜುನಾಥರವರು ರೋಟರಿ ಮಾಹಿತಿಯನ್ನು ನೀಡಿದರು. ಪದವಿ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಿ ಸ್ಕಾಲರ್‌ಶಿಪ್ ಸ್ವೀಕರಿಸದೇ ಇದ್ದ ಈ ಕೆಳಕಂಡ ವಿದ್ಯಾರ್ಥಿಗಳಿಗೆ ಅಂದು ಮುಖ್ಯ ಅತಿಥಿಗಳಿಂದ ಸ್ಕಾಲರ್‌ಶಿಪ್ ಮೆಡಲ್, ನಗದು ಬಹುಮಾನಗಳನ್ನು ಪ್ರಶಸ್ತಿ ಪತ್ರದೊಂದಿಗೆ ನೀಡಲಾಯಿತು. ರೊ. ನೀತು ದೀಪಕ್‌ರವರು ವಿದ್ಯಾರ್ಥಿಗಳನ್ನು ವೇದಿಕೆಗೆ ಆಹ್ವಾನಿಸಿದರು. ಚಿ.ನಂದನ್, ಚಿ.ಗಿರೀಶ್, ಶೋಭಿತ್ ಪ್ರಶಸ್ತಿ ಪಡೆದರು. ಇದೇ ಸಂದರ್ಭದಲ್ಲಿ ನಮ್ಮ ಕ್ಲಬ್‌ನ ಮಾಜಿಸದಸ್ಯರು ಹಾಗೂ ನಿರ್ದೇಶಕರಾಗಿದ್ದ ಶ್ರೀಮತಿ ನಿರ್ಮಲಾ ಶಿವಾನಂದರವರು ಆಗಮಿಸಿದ್ದು, ಅವರನ್ನು ಗುರುತಿಸಿ, ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆ ನೀಡಲಾಯಿತು. ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ಹಾಗೂ ಹುಟ್ಟು ಹಬ್ಬವನ್ನು ಆಚರಿಸಿಕೊಂಡ, ರೊ.ವಿಜಯಕುಮಾರ್ ಸಿ, ರೊ.ಲಕ್ಷ್ಮೀನಾರಾಯಣ ಭಟ್, ರೊ.ಸೆಂಥಿಲ್ ವೇಲನ್ ಮತ್ತು ರೊ.ಎಸ್.ಎಂ.ವೀರಭದ್ರಪ್ಪರವರನ್ನು ವೇದಿಕೆಗೆ ಆಹ್ವಾನಿಸಿದರು. ಅವರುಗಳಿಗೆ ಶುಭಾಶಯ ಕೋರಿ ನೆನಪಿನ ಕಾಣಿಕೆ ನೀಡಲಾಯಿತು. ಕ್ಲಬ್‌ನ ಮಾಜಿ ಅಧ್ಯಕ್ಷ ರೊ.ಎಸ್. ದತ್ತಾತ್ರಿಯವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿದ್ವಾನ್ ಲಕ್ಷ್ಮೀನಾರಾಯಣ ಭಟ್‌ರವರು, ತಮ್ಮೆಲ್ಲರ ಅಭಿಮಾನದಿಂದ ಈ ಕ್ಲಬ್‌ಗೆ ಮೂರು ಭಾರಿ ಇಲ್ಲಿಗೆ ಬಂದಿದ್ದೇನೆ. ತಾವೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದೀರಿ ಎಂಬುದೇ ಸಂತೋಷದ ವಿಷಯವಾಗಿದ್ದು, ಕೇಳುವವರಿಲ್ಲವಾದರೆ, ಹೇಳುವವರಿಗೇನು ಕೆಲಸ ಎಂಬುದಕ್ಕೆ ಉದಾಹರಣೆಯನ್ನು ನೀಡುತ್ತಾ ಸುಭಾಷಿತದ

## ಈ ವಾರದ ಸಭೆ

**ದಿನಾಂಕ :16–07–2025 ಬುಧವಾರ** **ಸಂಜೆ 6:45**

### ಕ್ಲಬ್ ಅಫೇರ್ಸ್

**2025–26 ನೇ ಸಾಲಿನ ರೋಟರಿ ಬಜೆಟ್ ಮಂಡನೆ ಮತ್ತು ಕ್ಲಬ್‌ನ ಚಟುವಟಿಕೆಗಳ ಬಗ್ಗೆ ಚರ್ಚೆ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

**ಸ್ಥಳ: ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ







ತುಣುಕೊಂದನ್ನು ಅರುಹಿದರು. 'ಬರಡು ಭೂಮಿಯಲ್ಲಿ ಅಗಸನಿಗೇನು ಕೆಲಸ' ಎಂಬಂತೆ, ಕೇಳುವವರಿಲ್ಲದೇ ಹೇಳುವವರಿಗೇನೂ ಕೆಲಸವಿರುವುದಿಲ್ಲ ಎಂದರು. ರೋಟರಿಯ ಸಾಮಾಜಿಕ ಸೇವೆಯ ಜೊತೆಗೆ ಆಧ್ಯಾತ್ಮಿಕ ಚಿಂತನೆಗಳನ್ನು ಹಂಚಿಕೊಳ್ಳುವುದು ಶ್ಲಾಘನೀಯ ಕೆಲಸವೇ ಆಗಿದೆ. ನಿಮ್ಮ ಕೆಲಸಗಳು ದೇವರ ಕೆಲಸಗಳಿಗೆ ಸಮನಾದುದು. ಬಡವರಿಗೆ ಕಷ್ಟದಲ್ಲಿರುವವರಿಗೆ ಸಹಾಯ ಮಾಡುತ್ತಿದ್ದೀರಿ. ಅದರಲ್ಲಿಯೂ ಆಶಾಕಿರಣದಂತಹ ಶಾಲೆಗಳು ಅತ್ಯಂತ ಯಶಸ್ವಿಯಾಗಿ ಸಾಗುತ್ತಿವೆ. **'ಸೇವಾ ಹಿ ಪರಮೋಧರ್ಮಃ'** ಎಂಬುವಂತೆ ರೋಟರಿಯಿಂದ ಹಲವಾರು ಸಾಮಾಜಿಕ ಕೆಲಸವಾಗುತ್ತಿದೆ. ದುಃಖದ ಸಂಗತಿ ಎಂದರೆ, ಕೋವಿಡ್ ನಂತರ ಶಾರೀರಿಕ ತೊಂದರೆ, ಧಿಡೀರ್ ಸಾವು ನೋವುಗಳು ದೂರದರ್ಶನದಲ್ಲಿ ಪ್ರಸಾರವಾಗುತ್ತಿವೆ. ಈಗ ನಮ್ಮ ಜೀವನದ ಆಲೋಚನೆ ದಿಕ್ಕೇ ಬದಲಾಗಿದೆ ಎಂದು ತಿಳಿಸಿ ಉದಾಹರಣೆಯನ್ನೀಯುತ್ತಾ ಕಮಲ ಅರಳಿದ ಸಮಯಕ್ಕೆ ಅದರಲ್ಲಿ ದುಂಬಿಯು ಸೇರುವ ಸಮಯಕ್ಕೆ ಸರಿಯಾಗಿ ಸೂರ್ಯಾಸ್ತವಾಗುತ್ತದೆ. ಅದರೊಳಗಿರುವ ದುಂಬಿ ಯೋಚಿಸುತ್ತದೆ. ಪುನಃ ಸೂರ್ಯೋದಯದ ನಂತರ ಹೂವು ಅರಳುತ್ತದೆ ತಾನು ಮಕರಂಧವನ್ನು ಹೀರಿ ಹೊರ ಹೋಗಬಹುದು ಎಂದು. ಆದರೆ ದುರಾದೃಷ್ಟವಶಾತ್ ಆನೆಯೊಂದು ಬಂದು ಹೂವನ್ನು ಕಿತ್ತೆಸೆಯುತ್ತದೆ. ಆಗ ದುಂಬಿ ಒಳಗೇ ತನ್ನ ಅವಧಿ ಮುಗಿಸಬೇಕಾಗುತ್ತದೆ. ಇದು ಮನುಷ್ಯನಿಗೆ ಒದಗಿ ಬಂದಿರುವ ಇಂದಿನ ವಿದ್ಯಮಾನವೆಂದು, ವಸ್ತು ಸ್ಥಿತಿಯೆಂದು ಬಹು ಮಾರ್ಮಿಕವಾಗಿ ವಿವರಿಸಿದರು. ನಾವು ಭವಿಷ್ಯದ ಬಗ್ಗೆ ಚಿಂತನೆಯನ್ನು ಮಾಡುತ್ತೇವೆ. ಆದರೆ ಅದಕ್ಕೆ ಭಗವಂತನ ಆಶೀರ್ವಾದವಿರಬೇಕು. ಅವನು ಹಣೆಯಲ್ಲಿ ಬರೆದಿರುವುದನ್ನು ಹರಿ ಹರ ಬ್ರಹ್ಮಾದಿಗಳಿಂದಲೂ ಬದಲಾಯಿಸಲಾಗದು. ನಮ್ಮದು ಅನಿತ್ಯ ಶರೀರ. ನೀರಿನ ಮೇಲಿನ ಗುಳ್ಳೆಯಂತೆ ಯಾವಾಗ ಬೇಕಾದರೂ ಒಡೆದು ಹೋಗಬಹುದು. ನಮಗೆ ನಿತ್ಯ ಮೃತ್ಯು ಸನ್ನಿಹಿತವಾಗಿರುತ್ತದೆ. ಆದರೂ ನಮ್ಮ ಜೀವನದಲ್ಲಿ ಧರ್ಮ ಸಂಗ್ರಹವಾಗಿರುತ್ತೆ. ಜೊತೆಗೆ ಕರ್ತವ್ಯ ಸಂಗ್ರಹವಾದಲ್ಲಿ ಜೀವನ ಪರಿಪೂರ್ಣವಾಗುತ್ತದೆ. ಪರಿಪೂರ್ಣ ಜೀವನವನ್ನು ಅನುಭವಿಸುತ್ತೀರಿ. ಈ ಕ್ಲಬ್‌ನ ರೊ.ಡಾ. ಪಿ.ನಾರಾಯಣರವರು ಪ್ರಖ್ಯಾತ ವೈದ್ಯರು. ನಮ್ಮ ಜರ್ಜರಿತವಾದ ದೇಹವನ್ನು ಸೌಖ್ಯಯುಕ್ತವನ್ನಾಗಿ ಮಾಡುತ್ತಾರೆ. ಅವರು ಶಿವಮೊಗ್ಗಕ್ಕೆ ಒಂದು ಹೆಮ್ಮೆ. ನಾವೆಲ್ಲಾ ಅವರ ಮಾರ್ಗದರ್ಶನದಲ್ಲಿದ್ದೇವೆ ಎಂದರು.

ಸೇವಾ ಹಿ ಪರಮೋಧರ್ಮವೆಂತಿದ್ದರೂ ತಂದೆ ತಾಯಿಯವರ ಸೇವೆ ಸರಿಯಾಗಿ ಆಗುತ್ತಿಲ್ಲವಾಗಿದೆ. ಏಕೆ ಈ ಪರಿಸ್ಥಿತಿ ಪ್ರಶ್ನಿಸಿದ ಮುಖ್ಯ ಅತಿಥಿಗಳು, ನಮ್ಮ ನಂತರದ ಪೀಳಿಗೆಗೆ ಈ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ. ಆಧ್ಯಾತ್ಮಿಕ ಚಿಂತನೆ ಇಲ್ಲ. ಅವರುಗಳನ್ನು ಆಧ್ಯಾತ್ಮಿಕದ ಕಡೆಗೆ ನಾವುಗಳು ಕರೆದುಕೊಂಡು ಹೋಗಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ ಎಂದರು. ಈ ಸಂದರ್ಭದಲ್ಲಿ ಬಬ್ರುವಾಹನ ಎಂಬ ರಾಜನ ಕಥೆಯೊಂದನ್ನು ಹೇಳುತ್ತಾ ಪ್ರೇತಾತ್ಮವೊಂದು ಪರಲೋಕಕ್ಕೆ ಸಾಗದೆ ಇಲ್ಲಿ ಉಳಿದು ಸಂಕಟ ಅನುಭವಿಸುತ್ತಿದ್ದ ಕಥೆಯನ್ನು ಹೇಳಿ ಪೂರಕವಾಗಿ ಗರುಡ ಪುರಾಣದ ಕೆಲವೊಂದು ಅಂಶಗಳನ್ನು ತಿಳಿಸಿ, ಮರಣಾನಂತರ ಪ್ರೇತಾತ್ಮಗಳಿಗೆ ಸದ್ಗತಿ ದೊರೆಯಲು * ವನ ಬೆಳೆಸಬೇಕು *ದತ್ತು ಪುತ್ರ ಸ್ವೀಕಾರ ಮಾಡಬೇಕು. ಅವನಿಗೆ ಸಂಸ್ಕಾರ ನೀಡಬೇಕು * ದೀನ ದಲಿತರಿಗೆ ಸೇವೆ ಮಾಡಬೇಕು ಇದರಿಂದ ಸದ್ಗತಿ ದೊರಕುತ್ತದೆ ಎಂದರು. * ತಂದೆ ತಾಯಿಗಳ ಸೇವೆ ಮಾಡಬೇಕು. ತಂದೆ ಅಥವಾ ತಾಯಿಯವರ ಮರಣಾನಂತರ ಒಂದು ವರ್ಷಗಳ ಕಾಲ ಹಬ್ಬ ಹರಿದಿನಗಳನ್ನು ನಡೆಸಬಾರದು. ನಿರಂತರ ತಂದೆ ತಾಯಿಯವರ ನೆನಪಲ್ಲಿ ಜೀವನ ಕಳೆಯಬೇಕು. ಆಗ ಎಲ್ಲಾ ದೋಷಗಳು ನಿವಾರಣೆಯಾಗುತ್ತೆ ಎಂದರು. ಇದರಿಂದ ಜೀವನ ಉಜ್ವಲವಾಗುತ್ತದೆ. ಈಗಿನ ಪೀಳಿಗೆಗೆ ಧಾರ್ಮಿಕತೆಯಲ್ಲಿ ನಂಬಿಕೆ ಇಲ್ಲವಾಗಿದ್ದು, ಇವೆಲ್ಲವನ್ನೂ ಮೊಬೈಲ್ ಆಕ್ರಮಿಸಿಕೊಂಡಿದೆ ಎಂದರು.

ಇಂದಿನ ದಿನಮಾನದಲ್ಲಿಯೂ ರೋಟರಿ ಕ್ಲಬ್ ಶಿವಮೊಗ್ಗವು ವಿಶೇಷ ಧ್ಯೇಯಗಳೊಂದಿಗೆ ಕೆಲಸ ಮಾಡುತ್ತಿದೆ. ನಿಮ್ಮ ಮಕ್ಕಳೂ ಮುಂದಿನ ಪೀಳಿಗೆಗೆ ಈ ಸೇವೆಗಳನ್ನು ತಿಳಿಸಿಕೊಟ್ಟು ಅವರುಗಳಿಗೆ ಇದರಿಂದ ಪ್ರೇರಣೆ ದೊರೆಯಲಿ. ನಿಮ್ಮ ಮಕ್ಕಳು ಒಳ್ಳೆಯ ಪ್ರಜೆಗಳಾಗಬೇಕು. ಜೊತೆಗೆ ಈ ರೋಟರಿ ಸಂಸ್ಥೆಯು ಅಜರಾಮರ ವಾಗಿರಲಿ. ನೀವು ಮಾಡುವ ಸೇವೆಯು ಸದ್ವಿನಿಯೋಗವಾಗಲಿ. ವಿಜಯ ರಥವಾಗಿ ಸಾಗಲಿ ಎಂದು ಆಶೀರ್ವದಿಸಿ ಶುಭ ಹಾರೈಸಿದರು.

ನೂತನ ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ, ವಿದ್ವಾನ್ ಲಕ್ಷ್ಮೀನಾರಾಯಣ ಭಟ್ಟರ ಆಶೀರ್ವಚನಕ್ಕೆ ಕೃತಜ್ಞತೆ ಸೂಚಿಸಿದರು. ಯೋಜನೆಗಳೆಲ್ಲವೂ ಇರುತ್ತವೆ. ಅದರ ಅನುಷ್ಠಾನಕ್ಕೆ ಭಗವಂತನ ಸಹಕಾರವಿರಬೇಕು. ಮಾನವೀಯ ಮತ್ತು ಪರಿಸರ ಸೇವೆ ಮಾಡುವ ಅವಕಾಶಗಳು ಹೆಚ್ಚು ಹೆಚ್ಚಾಗಿ ನಮಗೆ ಲಭಿಸಲಿ ಎಂದರು.




ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಾಗರೀಕ ಸನ್ಮಾನವನ್ನು ಸ್ವೀಕರಿಸಿದ ನಮ್ಮ ಕ್ಲಬ್‌ನ ಪಿತಾಮಹರೆಂದೇ ಖ್ಯಾತರಾಗಿರುವ ರೊ.ಪಿಡಿಜಿ. ಡಾ.ಪಿ.ನಾರಾಯಣರವರಿಗೆ, ಅತ್ಯಭಿಮಾನ ಪೂರಕವಾಗಿ ಸನ್ಮಾನಿಸಲಾಯಿತು. ರೊ. ಎನ್.ಎಸ್. ಶ್ರೀಧರ್, ರೊ.ವಿಶ್ವೇಂದ್ರ ಮತ್ತು ರೊ.ಟಿ.ಕೆ. ಮಹಾಬಲೇಶ್ವರ ಭಟ್‌ರವರು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳೊಡಗೂಡಿ ರೊ.ಪಿಡಿಜಿ ಡಾ.ಪಿ.ನಾರಾಯಣರವರನ್ನು ಮತ್ತು ಅಂದಿನ ಮುಖ್ಯ ಅತಿಥಿಗಳನ್ನು ಕೃತಜ್ಞತಾ ಪೂರಕವಾಗಿ ಸನ್ಮಾನಿಸಲಾಯಿತು.

ರೊ. ಸುನಿತಾ ಶ್ರೀಧರ್, ರೊ.ರೇಣುಕಾ ಶ್ರೀನಾಥ್, ರೊ.ಡಾ. ಮೈಥಿಲಿ, ರೊ.ಡಾ. ರಕ್ಷಾರಾವ್, ರೊ. ಭಾರ್ಗವೀ ಭಟ್, ರೊ.ಕಿಶೋರ್ ಶೀರನಾಳಿ, ರೊ. ಎನ್.ವಿ.ಭಟ್, ರೊ. ಎನ್.ಎಸ್. ಶ್ರೀಧರ್ ಮತ್ತು ಶ್ರೀ ಜಿ. ಸತ್ಯನಾರಾಯಣರವರುಗಳು ಸೇರಿ ರೊ.ಪಿಡಿಜಿ. ಡಾ.ಪಿ. ನಾರಾಯಣರವರ ಜೀವನ ಪರಿಚಯವನ್ನು ಹೊಂದಿರುವ ಸಮೂಹ ಗೀತೆಯನ್ನು ಹಾಡಿ ನೆರೆದಿದ್ದ ರೋಟರಿ ಸದಸ್ಯರನ್ನು ರಂಜಿಸಿದರು. ಕೊನೆಯಲ್ಲಿ ರೊ. ಎನ್.ಎಸ್. ಶ್ರೀಧರ್‌ರವರು ಸರ್ವರನ್ನು ವಂದಿಸಿದರು.

**ರೊ.ಪಿಡಿಜಿಡಾ.ಪಿ.ನಾರಾಯಣರವರ ಯಶೋಗಾಥೆಯ ಹಾಡು**
**(ಪಂಡರಾಪುರವೆಂಬ ಪುಟ್ಟ ಹಳ್ಳಿ ಹಾಡಿನರ್ಝುಲಕ್ ಹಿನ್ನೆಲೆಯೊಂದಿಗೆ)**

ಪಾಂಡೇಶ್ವರವೆಂಬ ಪುಟ್ಟ ಹಳ್ಳಿ
ಹಂಚಿನ ಮನೆಯೊಂದು ಇರುವುದಲ್ಲಿ
ನರಸಿಂಹ ಹೊಳ್ಳರ ಕುವರನಾಗಿ
ನಾರಾಯಣನಾಗಿ ಬೆಳೆದನಿಲ್ಲಿ
ಗುರುನರಸಿಂಹನ ಭಕ್ತನಾಗಿ
ವೈದ್ಯಕೀಯ ಶಾಸ್ತ್ರವನ್ನು ಕಲಿತವನಾಗಿ (ನಾರಾಯಣ)

ಶಿವಮೊಗ್ಗ ನಗರದಲ್ಲಿ ನೆಲೆಯಾಗಿ
ಜನರ ಸೇವೆ ಮಾಡುತಿಹನು ದಿಟವಾಗಿ
ರೋಟರಿ ಸಂಘದಲ್ಲಿ ತಾನು ತೊಡಗಿ
ಸಮಾಜವ ಸೇವಿಸಿದ ಸತತವಾಗಿ (ನಾರಾಯಣ)

ಹಾಡಲವನ ಸೇವೆಗಳ ದೊಡ್ಡಪಟ್ಟಿ
ಸಾಲದೇ ಸಾಲದು ನಮ್ಮ ಶಕ್ತಿ
ಸಂದಿತು ಸಂಘದಿಂದ ಪ್ರಶಸ್ತಿ ಹಾರ
ಹೆಚ್ಚುತ ಹೋಯಿತು ಕಾರ್ಯಭಾರ (ನಾರಾಯಣ)

ಆಶಾಕಿರಣ ಲಸಿಕೆಯ ದಾನ
ದೃಷ್ಟಿ ಜಾಗೃತಿಗಳು ಅಸ್ಥಿ ಭಾರ
ಬರ್ಮಿಂಗ್ಹ್ಯಾಮ್ ಮ್ಯುನಿಕ್ ಸಿಡ್ನಿ
ನೇಪಾಳಗಳಿಗೂ ಸಂಚಾರ (ನಾರಾಯಣ)

ಗುರುನರಸಿಂಹನ ಹೆಸರಿನ ಮಗ
ಮಮತೆಯನೂಡುವ ಸುತೆ ಮಮತೆ
ಬಂಧು ಭಾಂದವರ ತುಂಬು ಕುಟುಂಬ
ನಡೆಸಿದ ಶಾಂತಿಜೊತೆ ಸಂಸಾರ (ನಾರಾಯಣ)

ವೈದ್ಯ ಸಂಘದ ಶ್ರೇಷ್ಠಾಧ್ಯಕ್ಷ
ಶಿವಮೊಗ್ಗ ರೋಟರಿ ಪಿತಾಮಹ
ಶಿಕ್ಷಣ ಕ್ಷೇತ್ರದಿ ಕಾರ್ಯತತ್ಪರ
ಧಾರ್ಮಿಕ ಕ್ಷೇತ್ರದಿ ಖ್ಯಾತ ನಾಮ (ನಾರಾಯಣ)

ಕೂಟ ಜಗತ್ತಿನ ಮಹತ್ತರ ಸ್ಪೂರ್ತಿ
ಶಾರದ ಧನ್ವಂತರಿ ಅಧ್ಯಕ್ಷ
ಶಿವಮೊಗ್ಗ ಶೃಂಗೇರಿ ಮಠ ಧರ್ಮದರ್ಶಿ
ಸಾಲಿಗ್ರಾಮದ ಸಮಿತಿ ಸದಸ್ಯ (ನಾರಾಯಣ)

ಕುಟುಂಬ ಯೋಜನೆ ಸಂಘ ಕಟ್ಟಿದ
ವಿದ್ಯಾಭವನದ ಬುನಾದಿ ಹಾಕಿದ
ಕಲಾಂ ಸಾಹೇಬರ ಪ್ರೀತಿ ಗಳಿಸಿದ
ಅರಬಿಂದೋ ಸಂಸ್ಥೆಯ ಸಹ ಸಂಸ್ಥಾಪಕ (ನಾರಾಯಣ)

ರಾಷ್ಟ್ರೀಯ ಶಿಕ್ಷಣ ಸಮಿತಿಯಲ್ಲಿ
ಸಹ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ
ಶಿವಮೊಗ್ಗ ಜನರಿಂದ ಸನ್ಮಾನಿತರಾಗಿ
ಎಲ್ಲರ ಪ್ರೀತಿಗೆ ಪಾತ್ರರಾಗಿ (ನಾರಾಯಣ)

ನಾರಾಯಣ ಪಿ. ನಾರಾಯಣ
ನಾರಾಯಣ ನಮ್ಮ ನಾರಾಯಣ
ನಾರಾಯಣ ವೈದ್ಯ ನಾರಾಯಣ
ನಾರಾಯಣ ನಮ್ಮ ನಾರಾಯಣ



**ಶ್ರೇಷ್ಠ ಕೊಡುಗೆ – ಆರೋಗ್ಯ**
**ಶ್ರೇಷ್ಠ ಸಂಪತ್ತು – ಸಂತೃಪ್ತಿ**
**ಶ್ರೇಷ್ಠ ಸಂಬಂಧ – ಪ್ರಾಮಾಣಿಕತೆ**











ದಿನಾಂಕ :11-07-2025ರಂದು ವೀಣಾ ಶಾರದಾ ಪ್ರೌಢಶಾಲೆ, ಶರಾವತಿ ನಗರ, ಶಿವಮೊಗ್ಗ ಇಲ್ಲಿ ಇಂಟರ್ಯಾಕ್ಟ್ ಕ್ಲಬ್ ಉದ್ಘಾಟಿಸಲಾಯಿತು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಯೂನಿಫಾರಂ ವಿತರಿಸಲಾಯಿತು. ಅಧ್ಯಕ್ಷರಾದ ರೊ. ಆನಂದ್ ಆರ್., ರೊ. ಸೂರ್ಯನಾರಾಯಣ ಉಡುಪ, ರೊ. ಸುನೀತಾ ಶ್ರೀಧರ್ ಮತ್ತು ರೊ. ವೀರಣ್ಣ ಎ. ಹುಗ್ಗಿ ಇವರುಗಳು ಉಪಸ್ಥಿತರಿದ್ದರು.

**ರೋಟರಿ ವಾರ್ತೆಗಳು : ರೊ. ಡಿ.ಎಲ್. ಮಂಜುನಾಥರವರಿಂದ**

- ಇಟಲಿ ದೇಶದ ರೋಟರಿ ಕ್ಲಬ್ ರಾಗೂಸಾದ ರೊ. ಫ್ರಾನ್ಸ್‌ಸ್ ಕೋ ಅರೇಜೂರವರು ಅಂತರರಾಷ್ಟ್ರೀಯ ರೋಟರಿ ಅಧ್ಯಕ್ಷರಾಗಿ 2025-26 ನೇ ಸಾಲಿಗೆ ಆಯ್ಕೆಯಾಗಿದ್ದಾರೆ.
- ನಮ್ಮ ರೋಟರಿ ಜಿಲ್ಲೆ 3182 ರಜಿಲ್ಲಾ ಗವರ್ನರ್ ಆಗಿ ರೊ. ಕೆ. ಪಾಲಾಕ್ಷರವರು ಆಯ್ಕೆಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.
- ತಮಿಳುನಾಡಿನ ರೋಟರಿ ಕ್ಲಬ್ ವಿರುಧನಗರ್ ರೋಟರಿ ಜಿಲ್ಲೆ 3212ರವರು ಸುಸಜ್ಜಿತವಾದ ಒಂದು ವಿಜ್ಞಾನ ರಥವನ್ನು ನಿರ್ಮಿಸಿ ಅದರಲ್ಲಿ ವಿವಿಧ ಕೌತುಕ ವಿಜ್ಞಾನ ಪ್ರಯೋಗಗಳನ್ನು ಪ್ರದರ್ಶಿಸುವ ಒಂದು ಬೃಹತ್‌ಯೋಜನೆಯನ್ನು ರೂಪಿಸಿ ಒಂದು ವರ್ಷದಲ್ಲಿ 735 ಶಾಲೆಗಳು, 25 ಕಾಲೇಜುಗಳು ಒಟ್ಟು 211183 ವಿದ್ಯಾರ್ಥಿಗಳಿಗೆ 513 ದಿನಗಳ 9428 ಪ್ರಾಧ್ಯಾಪಕರನ್ನು ತೊಡಗಿಸಿಕೊಂಡು 42056 ಕಿ.ಮಿ. ಪ್ರಯಾಣಿಸಿ ಬೃಹತ್‌ಕಾರ್ಯಕ್ರಮ ರೂಪಿಸಿಕೊಂಡು ಸಮರ್ಪಿಸಿದ್ದಾರೆ.
- ರೋಟರಿ ಕ್ಲಬ್ ಆಗ್ರಾ ರೋಟರಿ ಜಿಲ್ಲೆ 3110 ರವರು ವಿಕಲ ಚೇತನ ಹೊಂದಿರುವ ವಿವಿಧ ಶಾಲಾ ಮಕ್ಕಳಿಗೆ ಮತ್ತು ಪೋಷಕರಿಗೆ ಅತ್ಯುತ್ತಮ ಕ್ರೀಡೆ, ಮನರಂಜನೆ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ಆ ಮಕ್ಕಳ ಮುಖದಲ್ಲಿ ಸಂತೋಷದ ಕ್ಷಣಗಳನ್ನು ಮೂಡುವ ವಿನೂತನ ಕಾರ್ಯಕ್ರಮವನ್ನು ರೂಪಿಸಿರುತ್ತಾರೆ.

**ರೋಟರಿಯ ಉದ್ದೇಶ ನಮ್ಮ – ನಿಮ್ಮೆಲ್ಲರ ಸಂಬಂಧಗಳ ಬೆಸುಗೆ**

## ದಿನಾಂಕ: 02–07–2025ರ ಪದವಿ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಿದ್ದ ವಿವಿಧ ಕ್ಲಬ್‌ಗಳ ಗಣ್ಯರು.


ರೊ.ಚಂದ್ರಶೇಖರ್ ಎ.ಎಸ್., ಮಾಜಿ ರೋಟರಿ ಗವರ್ನರ್
ರೊ. ಹೆಚ್.ಎಲ್. ರವಿ, ಮಾಜಿರೋಟರಿಗವರ್ನರ್
ರೊ. ಎಸ್.ಆರ್. ನಾಗರಾಜ್,ಮಾಜಿ ಸಹಾಯಕಗವರ್ನರ್
ರೊ. ಬಸವರಾಜ್, ಅಧ್ಯಕ್ಷರು ಶಿವಮೊಗ್ಗ ನಾರ್ಥ್
ರೊ. ಗುರುರಾಜ್‌ಗಿರಿಮಾಜಿ, ಮಾಜಿ ಸಹಾಯಕಗವರ್ನರ್
ರೊ. ರಾಜಶೇಖರ, ಮಾಜಿ ಅಧ್ಯಕ್ಷರು ರೋಟರಿ ಜ್ಯೂಬಿಲಿ
ಶ್ರೀಮತಿ ಲತಾ ರಮೇಶ್ – ನೂತನ ಇನ್ನರ್ ಅಧ್ಯಕ್ಷೆ
ರೊ. ಪ್ರಕಾಶ ಮೂರ್ತಿ, ಶಿವಮೊಗ್ಗ ಮಲ್ನಾಡ್ ನೂತನ ಅಧ್ಯಕ್ಷ
ರೊ. ಜಿ.ವಿಜಯಕುಮಾರ್, ಮಾಜಿ ರೋಟರಿ ಈಸ್ಟ್
ರೊ. ಎಸ್.ಜಿ. ಆನಂದ, ಮಾಜಿ ಸಹಾಯಕ ಗವರ್ನರ್
ರೊ. ವಾಗೀಶ್, ಮಾಜಿ ಅಧ್ಯಕ್ಷ ರೋಟರಿ ಜ್ಯೂಬಿಲಿ
ರೊ. ರೇವಣ ಸಿದ್ದಪ್ಪ ಮಾಜಿ ಅಧ್ಯಕ್ಷರು ರೋಟರಿ ಜ್ಯೂಬಿಲಿ
ರೊ. ಮಲ್ಲೇಶ್, ರಿವರ್‌ಸೈಡ್
ರೊ. ಶಂಕರ ಎಸ್.ಪಿ., ಜೋನಲ್ ಲೆಫ್ಟಿನೆಂಟ್
ರೊ. ದೇವೇಂದ್ರಪ್ಪ ಮಾಜಿ ಅಧ್ಯಕ್ಷರು, ರಿವರ್‌ಸೈಡ್
ರೊ. ನಾಗರಾಜ್ ಎಂ., ಮಾಜಿ ಅಧ್ಯಕ್ಷರು, ರಿವರ್‌ಸೈಡ್
ರೊ. ಶ್ರೀನಾಥ್ ಗಿರಿಮಾಜಿ, ಮಾಜಿ ಅಧ್ಯಕ್ಷರು, ನಾರ್ಥ್
ರೊ. ಅರುಣ್ ದೀಕ್ಷಿತ್ ಮಾಜಿ ಅಧ್ಯಕ್ಷರುಈಸ್ಟ್
ರೊ. ಪ್ರೊ. ಸತ್ಯನಾರಾಯಣ, ಮಾಜಿ ಅಧ್ಯಕ್ಷರು, ನಾರ್ಥ್
ಶ್ರೀಮತಿ ಚಂದ್ರಿಕಾಗಿರಿಮಾಜಿ ಮಾಜಿ ಅಧ್ಯಕ್ಷರು ಇನ್ನರ್ ವ್ಹೀಲ್
ರೊ. ಮಂಜುಳಾ ರಾಜು, ರೊ. ರಾಜು
ರೊ. ಎಂ. ಪಿ. ಆನಂದಮೂರ್ತಿ, ಮಾಜಿ ಸಹಾಯಕ ಗವರ್ನರ್
ರೊ. ರವೀಂದ್ರನಾಥ ಐತಾಳ್. ಮಾಜಿ ಸಹಾಯಕ ಗವರ್ನರ್
ರೊ. ರವೀಕೋಟೋಜಿ, ಮಾಜಿ ಸಹಾಯಕ ಗವರ್ನರ್
ರೊ. ಭಾರತಿ ಚಂದ್ರಶೇಖರ್

ರೊ. ಬಿ.ಬಸವರಾಜ್, ರೊ.ನಟರಾಜ್, ರೊ.ಜಯಶ್ರೀ ಶೆಟ್ಟಿ, ರೊ. ಕಿರಣ್‌ಕುಮಾರ್ ಜಿ., ಮುಸ್ತಾಕ್ ಅಲಿಷಾ, ರೊ. ನಾಗರಾಜ್, ರೊ.ಆರ್‌ಎನ್. ಮಂಜುನಾಥ್, ರೊ.ಸಂತೋಷ್ ಎಸ್.ಎಸ್. ರೊ. ಬದ್ರಿಪ್ರಸಾದ್ ಟಿ.ಎ., ರೊ.ಧನಂಜಯ ಬಿ.ಆರ್, ರೊ.ಕಿಶೋರ್ ಕುಮಾರ್ ಡಿ., ರೊ.ವಿಜಯ ಪ್ರಕಾಸ್, ರೊ. ಚಂದ್ರು ಜೆ.ಪಿ., ರೊ.ರಾಜೇಶ್ ಪಿ.,ರೊ. ನಿತಿನ್ ಯಾದವ್, ರೊ.ಡಾ. ಶಿವಕುಮಾರ್ ಕೆ., ರೊ.ಡಾ. ಸಿದ್ದಲಿಂಗ ಮೂರ್ತಿ, ರೊ.ಅಣಜಿ ಬಸವರಾಜ್ ರೊ.ರಶ್ಮಿ ಸತೀಷ್, ರೊ.ರಮಾನಾಥ್ ಗಿರಿಮಾಜಿ, ರೊ.ಎ.ಎಸ್.ಗುರುರಾಜ, ರೊ. ಈಶ್ವರ ಬಿವಿ.ರೊ. ಸುರೇಶ್ ಎಂ.

## Happy Birthday




Senthil Velan 09th July | Gopal S G 10th July | Deepak Kori 11th July | Dr Narayan P 12th July




## Details of Scholarship Awards from the Rotary Club Shimoga for the year 2025 at the time of Installation on 2nd July, 2025

| Sl | Name of the student | Class | Marks | School | Award Title |
|---|---|---|---|---|---|
| 01 | Nithya M. Kulkarni | SSLC | 625 | Ramakrishna School | Rama Sastry Memorial Award |
| 02 | Sahishnu N | SSLC | 625 | Adichunchanagiri | Rotary 75th Anny Trust |
| 03 | Sanjana S | SSLC | 625 | Adichunchanagiri | Rotary Club, Shimoga |
| 04 | Namana K | SSLC | 625 | Priyadarshini | |
| 05 | Prajwal H.P. | PUC | 594 | Vikasa PU College | Rotary 75th Anny Trust |
| 06 | Shobhith H | Neet | 99.83 Rank | PACE | Rotary 75th Anny Trust |
| 07 | RinkuServi | PUC | 586 | DVS Independent | Rotaract Award |
| 08 | YovithaAkanksha | PUC | 581 | DVS Independent | RavindranathSastry Memorial |
| 09 | Gowramma D.V | PUC | 592 | DVS Independent | RavindranathSastry Memorial |
| 10 | SuvebaNaz | SSLC | 547 | GGHS BHRoad SMG | KateelAppuPai |
| 11 | Uma M | SSLC | 558 | GGHS Vinobha Nagar | KateelAppuPai |
| 12 | Mohammed Zeeshan | SSLC | 534 | National High School | YTV Jois Memorial |
| 13 | Divya | SSLC | 529 | National High School | YTV Jois Memorial |
| 14 | Nandan | SSLC | 526 | National High School | YTV Jois Memorial |
| 15 | Incharalthal | SSLC | 593 | Vikasa High School | YTV Jois Memorial |
| 16 | Nithya M | PUC | 530 | Govt PU College | YTV Jois Memorial |
| 17 | Rakshitha P | PUC | 555 | Govt PU College | YTV Jois Memorial |
| 18 | Neha D | PUC | 522 | Govt PU College | YTV Jois Memorial |
| 19 | Charlae D Souza | PUC | 496 | Govt PU College | YTV Jois Memorial |
| 20 | Girish K | PUC | 533 | Govt PU College | YTV Jois Memorial |
| 21 | Babu | PUC | 502 | Govt PU College | YTV Jois Memorial |
| 22 | Zahir Hussain | SSLC | 551 | Govt PU College | Dr. Ashok Pai Memorial |
| 23 | Bhoomika N.R | SSLC | 545 | Govt PU College | Dr. Ashok Pai Memorial |




To,

*Book Post*